**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 37/2021</u>**

ದಿನಾಂಕಃ 19.12.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -1 ಅ.ಸಾ -1

| | | |
|---|---|---|
| ಹೆಸರು | ಃ | ಶ್ರೀಮತಿ. ಅಲ್ಮಾಸ್ ಬೇಗಂ |
| ಗಂಡನ ಹೆಸರು | ಃ | ಸುಮೇರ್ ಖಾನ್ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಹೊಂಗನೂರು |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಮೃತ ದಯಾನ್ ಖಾನ್ ನನ್ನ ಗಂಡನ ತಮ್ಮನ ದತ್ತು ಮಗ ಇರುತ್ತಾನೆ. ನಾನು ಮತ್ತು ದಯಾನ್ ಖಾನ್ ಸುಮಾರು ನಾಲ್ಕು ವರ್ಷಗಳ ಹಿಂದೆ ಮೊಹರಂ ಹಬ್ಬಕ್ಕೆಂದು ನನ್ನ ತಾಯಿ ರಾಮನಗರಕ್ಕೆ ಬಂದಿದ್ದೇವು. ದಿನಾಂಕ 14.09.2020 ರಂದು ದಯಾನ್ ಖಾನ್ ರಾತ್ರಿ ಸುಮಾರು 9.30 ರ ಸಮಯಕ್ಕೆ ಬಲೂನ್ ತರಲು ಎಂದು ನಮ್ಮ ಅಮ್ಮನ ಮನೆಯ ಹತ್ತಿರದ ನೂರಿ ಸರ್ಕಲ್ ಹತ್ತಿರದ ಅಂಗಡಿಗೆ ಹೋಗಿದ್ದ. ದಯಾನ್ ಖಾನ್ ಗೆ ಸುಮಾರು 4 ವರ್ಷ ಆಗಿತ್ತು. ಹೋದವನು ವಾಪಸ್ಸು ಬರಲಿಲ್ಲ. ನಂತರ ನಾವು ಎಲ್ಲಾ ಕಡೆ ಹುಡುಕಾಡಿದೆವು ಅವನು ಸಿಕ್ಕಲಿಲ್ಲ.

ಮರುದಿನ ರಾಮನಗರದ ಪುರ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇವೆ. ಸಾಕ್ಷಿ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ

ಗುರುತಿಸಿದ್ದು ದೂರನ್ನು **ನಿಪಿ-1** ಎಂದು ಮತ್ತು ಸಾಕ್ಷಿ ಸಹಿಯನ್ನು **ನಿಪಿ-1** ಎ ಎಂದು ಗುರುತಿಸಲಾಯಿತು. ಅದೇ ದಿನ ಮಧ್ಯಾಹ್ನ 3.30 ರ ಸಮಯಕ್ಕೆ ಪೋಲಿಸರು ನನ್ನ ಅಮ್ಮನ ಮನೆ ಬಳಿ ಬಂದಿರುತ್ತಾರೆ. ಪೋಲಿಸರು ನಮ್ಮನ್ನು ವಿಚಾರಿಸಿ ಮಹಜರ್ ಮಾಡಿದ್ದು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಸಾಕ್ಷಿ ಪಂಚನಾಮಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು **ನಿಪಿ-2** ಎಂದು ಮತ್ತು ಸಾಕ್ಷಿ ಸಹಿಯನ್ನು **ನಿಪಿ-2** ಎ ಎಂದು ಗುರುತಿಸಲಾಯಿತು. ಸುಮಾರು 3 ದಿನಗಳ ನಂತರ ನಮ್ಮ ಅಮ್ಮನ ಮನೆಯ ಬಳಿ ಅಖಿಲ್ ಬಂದು ಆರೋಪಿ ದಯಾನ್ ಖಾನ್ ಬೈಕ್ ನಲ್ಲಿ ಟಿಪ್ಪು ಸರ್ಕಲ್ ಕಡೆಗೆ ಕರೆದುಕೊಂಡು ಹೋಗುತ್ತಿದ್ದ ಎಂದು ಹೇಳಿದರು. ನಂತರ ಈ ವಿಷಯವನ್ನು ಪೋಲಿಸರಿಗೆ ನಾವು ಹೇಳಿರುತ್ತೇವೆ. ಸುಮಾರು 7 ದಿನಗಳ ನಂತರ ಬಿಡದಿ ಬಳಿಯ ಅರ್ಕಾವತಿ ನದಿಯ ಸೇತುವೆ ಹತ್ತಿರ ದಯಾನ್ ಖಾನ್ ಶವ ಇರುವುದಾಗಿ ಮುಜಮಿಲ್ ಪೋಲಿಸರ ಬಳಿ ಹೇಳಿರುತ್ತಾರೆ. ನಂತರ ಪೋಲಿಸರು ಈ ವಿಷಯವನ್ನು ನನ್ನ ಅಣ್ಣ ಅಸ್ಲಾಮ ಬೇಗ್ ಗೆ ಹೇಳಿರುತ್ತಾರೆ.

ನಂತರ ಮುಜಮಿಲ್ ಶವ ಇರುವ ಜಾಗವನ್ನು ತೋರಿಸುವುದಾಗಿ ಕರೆದುಕೊಂಡು ಹೋಗಿದ್ದರು. ಆರೋಪಿ ಹಣಕ್ಕಾಗಿ ಕೊಲೆ ಮಾಡಿರುತ್ತೇನೆಂದು ಪೋಲಿಸರ ಮುಂದೆ ಹೇಳಿರುವುದಾಗಿ

ಪೋಲಿಸರು ಹೇಳಿರುತ್ತಾರೆ. ಮೇಲೆ ಹೇಳಿರುವುದನ್ನು ಪೋಲಿಸರ ಮುಂದೆ ನಾನು ಹೇಳಿರುತ್ತೇನೆ.

**ಪಾಟೀ ಸವಾಲುಃ ಶ್ರೀ.ಕೆ. ವಿಜಯ್ ಕುಮಾರ್, ಸಿ.ಎಲ್.ಎ.ಡಿ. ಸಿ. ವಕೀಲರಿಂದ ಆರೋಪಿ ಪರ ಃ**

**(ಸಾಕ್ಷಿ ತನ್ನ ಬಲಗೈನ ಮುಷ್ಟಿಯಲ್ಲಿ ಚಿಕ್ಕ ಚೀಟಿ ಇಟ್ಟುಕೊಂಡಿದ್ದು ಅದರಲ್ಲಿ ದಿನಾಂಕ 14.09.2020, 15.09.2020 ಮತ್ತು 24.09.2020 ಎಂದು ಬರೆದಿರುತ್ತದೆ. ಮಾನ್ಯ ಸ.ಅ. ರವರು ಸಾಕ್ಷಿ ಮುಷ್ಟಿಯಲ್ಲಿ ಚೀಟಿ ಇಟ್ಟುಕೊಂಡಿದ್ದರು ಕಟಕಟೆಯಲ್ಲಿ ಅದನ್ನು ನೋಡಿ ಮುಖ್ಯ ವಿಚಾರಣೆ ಸಾಕ್ಷ್ಯ ಹೇಳಿರುವುದಿಲ್ಲ ಎಂದು ಹೇಳಿದ್ದು, ನ್ಯಾಯಾಲಯ ಕೂಡ ಸಾಕ್ಷಿ ಮುಷ್ಟಿಯಲ್ಲಿ ಇರುವ ಚೀಟಿಯನ್ನು ಕಟಕಟೆಯಲ್ಲಿ ನೋಡಿ ಸಾಕ್ಷ್ಯ ಹೇಳಿರುವುದನ್ನು ಗಮನಿಸಿರುವುದಿಲ್ಲ.)**

ಅಂಗಡಿ ನಮ್ಮ ಮನೆಯಿಂದ ಸುಮಾರು 5 ಮನೆಗಳ ನಂತರ ಇತ್ತು. ಅಂಗಡಿಯ ಮಾಲೀಕ ಅಲಿಜಾನ್ ರವರಿಗೆ ನಮ್ಮ ತಾಯಿ ಮನೆಯವರು ಮತ್ತು ನಾನು ಸುಮಾರು 20 ವರ್ಷಕ್ಕೂ ಹೆಚ್ಚಿಗೆ ಸಮಯದಿಂದ ಗೊತ್ತು. ಅಖಿಲ್ ಮನೆ ಕೂಡ ನನ್ನ ತಾಯಿ ಮನೆ ಇರುವ ಪ್ರದೇಶದಲ್ಲಿಯೇ ಇರುತ್ತದೆ. ಅಖಿಲ್ ಕೂಡ ನನಗೆ ಚೆನ್ನಾಗಿ ಗೊತ್ತು. ಆರೋಪಿ ನನ್ನ ತಂಗಿ ಗಂಡ ಇರುತ್ತಾರೆ. ದೂರು ಕೊಡುವುದಕ್ಕೆ ಮೊದಲು ಅಲಿಜಾನ್ ಅಂಗಡಿ ಮಾಲೀಕ, ನಮ್ಮ ಪ್ರದೇಶದ ಮನೆಯವರನ್ನು ಮತ್ತು ಅಖಿಲ್ ರವರನ್ನು ವಿಚಾರಿಸಿದ್ದೇವು.

ಕೇಳಿದವರು ಬಲೂನ್ ತೆಗೆದುಕೊಂಡ ನಂತರ ದಯಾನ್ ಖಾನ್ ಅಂಗಡಿಯಿಂದ ಹೋಗಿದ್ದಾಗಿ, ನಂತರ ಏನಾಗಿರುತ್ತದೆ ಎಂದು ಗೊತ್ತಿಲ್ಲ ಎಂದು ಹೇಳಿರುತ್ತಾರೆ.

ನಂತರ ಸುಮಾರು 7 ರಿಂದ 8 ದಿನಗಳ ಕಾಲ ರಾಮನಗರದಲ್ಲಿ ಈ ಕುರಿತು ವಿಚಾರಿಸಿರುತ್ತೇವೆ. ಯಾರು ನೋಡಿರುವುದಾಗಿ ಹೇಳಿರುವುದಿಲ್ಲ. ಪೋಲಿಸರು ದೂರು ನೀಡಿದ ನಂತರ ಅಂಗಡಿಯವರ ಬಳಿ, ಸುತ್ತಮುತ್ತ ಮನೆಯವರ ಬಳಿ ವಿಚಾರಿಸಿರುತ್ತಾರೆ. ದೋ.ಪ.ಸಾಕ್ಷಿ-7, ಅಖಿಲ್ ಕೂಡ ಪೋಲಿಸರು ವಿಚಾರಿಸಿರುತ್ತಾರೆ. ಯಾರು ಕೂಡ ಬಲೂನ್ ತೆಗೆದುಕೊಂಡ ನಂತರ ಮಗು ಏನಾಗಿದೆ ಎಂದು ಹೇಳಿರಲಿಲ್ಲ. ಅಂಗಡಿಯವರು ಬಲೂನ್ ತೆಗೆದುಕೊಂಡ ನಂತರ ಮನೆ ಕಡೆ ಹೋಗಿದ್ದಾಗಿ ಹೇಳಿರುತ್ತಾರೆ. ನೂರಿ ವೃತ್ತದಿಂದ ಟಿಪ್ಪು ವೃತ್ತದವರೆಗಿನ ರಸ್ತೆಯಲ್ಲಿ ಕೆಲವು ಅಂಗಡಿಯವರು ಸಿಸಿ ಟಿವಿ ಹಾಕಿಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಟಿಪ್ಪು ವೃತ್ತದಲ್ಲಿ ಕೆಲವು ಅಂಗಡಿಯವರು ಸಿಸಿ ಟಿವಿ ಹಾಕಿಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

ದೂರು ನೀಡಿದ ಸುಮಾರು 3 ದಿನಗಳ ನಂತರ ಪೋಲಿಸರು ನಮ್ಮ ಅಮ್ಮನ ಮನೆ ಬಳಿ ಬಂದು ನನ್ನನ್ನು ಕೇಳಿ ಬರೆದುಕೊಂಡು ಹೋಗಿರುತ್ತಾರೆ. ಪೋಲಿಸರಿಂದ ಮಗು ಸತ್ತು ಹೋಗಿರುವ ವಿಚಾರ ನಮಗೆ ಗೊತ್ತಾಗಿರುತ್ತದೆ ಎನ್ನುವುದು ಸರಿ ಇದೆ. ದೋ.ಪ.ಸಾಕ್ಷಿ-7

ಮಗುವನ್ನು ಆರೋಪಿ ಕರೆದುಕೊಂಡು ಹೋದ ಬಗ್ಗೆ ನಮಗೆ ಹೇಳಿದ್ದನ್ನು ನಾನು ಪೋಲಿಸರ ಮುಂದೆ ಮೂರು ದಿನದ ನಂತರ ಮನೆ ಬಳಿ ಬಂದಿದ್ದಾಗ ಹೇಳಿರುತ್ತೇನೆ. ಪೋಲಿಸರು ನಾನು ಹೇಳಿದ್ದನ್ನು ಬರೆದುಕೊಂಡಿರುತ್ತಾರೆ. ಮಗು ಮೃತನಾಗಿರುತ್ತಾನೆಂದು ನಮಗೆ ವೈಯುಕ್ತಿಕವಾಗಿ ಗೊತ್ತಿಲ್ಲ ಪೋಲಿಸರ ಹೇಳಿಕೆ ಮೇರೆಗೆ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ದೋ.ಪ.ಸಾಕ್ಷಿ-7 ಮಗುವನ್ನು ಬೈಕ್ ನಲ್ಲಿ ಆರೋಪಿ ಕರೆದುಕೊಂಡು ಹೋಗುತ್ತಿದ್ದುದ್ದಾಗಿ ಹೇಳಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಆರೋಪಿ ಮಗುವಿನ ದೇಹ ಇರುವುದಾಗಿ ಪೋಲಿಸರ ಮುಂದೆ ಹೇಳಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಆರೋಪಿ ವಿರುದ್ಧ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಎಲ್ಲಾ ಸುಳ್ಳು ಆಗಿದ್ದು ಅದನ್ನು ಪೋಲಿಸರ ಮಾತು ಕೇಳಿ ಹೇಳಿರುತ್ತೇನೆ ಎನ್ನುವುದು ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.